# 2015ರ ಗ್ರಾಮ ಪಂಚಾಯತ್ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಘೋಷಣೆ

ಭಾರತದ ದೇಶದ ಪ್ರಜೆಯಾದ ನಾನು ಈ ದೇಶದ ಸಂವಿಧಾನವನ್ನು ಗೌರವಿಸುವುದಕ್ಕೆ ಬದ್ಧನಾಗಿದ್ದೇನೆ. ಸಂವಿಧಾನದ ಆಶಯಗಳನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸುವುದರ ನಾನು ಬದ್ಧನಾಗಿದ್ದೇನೆ. ಈಗ ನಡೆಯುತ್ತಿರುವ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ನಾನು ಪ್ರಜಾಪ್ರಭುತ್ವದ ನೆಲೆಯಲ್ಲಿ ಜನರ ಜೊತೆಗೆ ಒಡಗೂಡಿ ಪ್ರಾಮಾಣಿಕವಾಗಿ, ಅವರೊಂದಿಗೆ ಸೇರಿ ಸೇವೆ ಸಲ್ಲಿಸುವುದಕ್ಕೋಸ್ಕರ ಯಾವುದೇ ರೀತಿಯ ಸ್ವಂತ ಹಿತಾಸಕ್ತಿಗೆ ಪ್ರಾಶಸ್ತ್ಯ ಕೊಡದೆ, ಜನರ ಸೇವಕನಾಗಿ ಕೆಲಸ ಮಾಡಲು ಬದ್ಧನಾಗಿದ್ದೇನೆ. ಯಾವುದೇ ಪಕ್ಷ ರಾಜಕೀಯ ಮಾಡದೇ ಈ ಚುನಾವಣೆಯಲ್ಲಿ ಜನರ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಜನರಿಗೆ ಪ್ರಜಾಪ್ರಭುತ್ವದ ಮೂಲಕಲ್ಪನೆಯನ್ನು ಅರ್ಥೈಸಿಕೊಳ್ಳಲು, ಮಕ್ಕಳು ಮತ್ತು ಮಹಿಳೆಯರು ಸೇರಿ ಎಲ್ಲರನ್ನೂ ಗೌರವಿಸುತ್ತಾ ಈ ಕೆಳಗಿನ ಅಂಶಗಳನ್ನು ನಾನು ಪ್ರಾಮಾಣಿಕವಾಗಿ ಪಾಲಿಸುತ್ತೇನೆಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇನೆ.

1. ಹಣ, ಹೆಂಡ, ವಸ್ತುಗಳನ್ನು ಹಂಚದೇ, ಪ್ರಾಮಾಣಿಕ, ಚೊಕ್ಕ ಚುನಾವಣೆಯ ಭಾಗವಾಗುತ್ತೇನೆ.
2. ಜನಭಾಗವಹಿಸುವಿಕೆಗೆ ಬೆಂಬಲ ನೀಡುತ್ತೇನೆ.
3. ನಮ್ಮ ದೇಶದ ಸಂವಿಧಾನಕ್ಕೆ ಬದ್ಧನಾಗಿರುವೆ, ಅದರ ರಕ್ಷಣೆ, ಅನುಷ್ಠಾನಕ್ಕೆ ಬದ್ಧನಾಗಿರುವೆ.
4. ಅಧಿಕಾರ ವಿಕೇಂದ್ರೀಕರಣದಲ್ಲಿ ಬದ್ಧತೆ ಉಳ್ಳವನಾಗಿದ್ದೇನೆ.
5. ಆಧ್ಯತಾನುಸಾರ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲಿ ಮಾಡಲು ಬದ್ಧನಾಗಿರುತ್ತೇನೆ.
6. ಜನಪರ ಕಾಳಜಿ ಇರುವವನಾಗಿದ್ದೇನೆ.
7. ಅಭಿವೃದ್ಧಿಯಲ್ಲಿ ಪಕ್ಷ ರಾಜಕೀಯ ಮಾಡುವುದಿಲ್ಲ.
8. ಜನರನ್ನು ಹಣಕೊಟ್ಟು ಕೊಂಡುಕೊಳ್ಳುವುದಿಲ್ಲ.
9. ಮಹಿಳೆ ಮತ್ತು ಮಕ್ಕಳ ಬಗ್ಗೆ ಗೌರವ ಮತ್ತು ಕಾಳಜಿ ಉಳ್ಳವನಾಗಿದ್ದು, ಅವರ ಪರವಾಗಿ ಕೆಲಸ ಮಾಡುತ್ತೇನೆ.
10. ಪಾರದರ್ಶಕ ಆಡಳಿತ ನಡೆಸುತ್ತೇನೆ.
11. ಜಾತಿ, ಮತ, ಧರ್ಮ, ಪ್ರಾದೇಶಿಕ, ಲಿಂಗ, ವಯಸ್ಸಿನ ಬೇಧ ಮಾಡದೇ ಎಲ್ಲರ ಅಭಿವೃದ್ಧಿಗೆ ಬದ್ಧನಾಗಿರುವೆ.
12. ನನ್ನ ಪಂಚಾಯತ್ ವ್ಯಾಪ್ತಿಯಲ್ಲಿ ಅಕ್ರಮ ಮದ್ಯಮಾರಾಟವೂ ಸೇರಿದಂತೆ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳಲು, ಅಂತಹ ಚಟುವಟಿಕೆಗಳನ್ನು ಜನಭಾಗವಹಿಸುವಿಕೆಯ ಮೂಲಕ ತಡೆಗಟ್ಟಲು ನಾನು ಬದ್ಧನಾಗಿರುತ್ತೇನೆ.
13. ಪ್ರಜಾಪ್ರಭುತ್ವ ಗಣರಾಜ್ಯದ ತಿರುಳಾದ ಗ್ರಾಮ ಸಭೆಯ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ ಶ್ರೀ ರಮೇಶ್ ಕುಮಾರ್ ಅಧ್ಯಕ್ಷತೆಯ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯ ವರದಿಯ ಶಿಫಾರಸ್ಸುಗಳ ಅನುಷ್ಠಾನಕ್ಕೆ ನಾನು ಬದ್ಧನಾಗಿರುತ್ತೇನೆ.

ಹೆಸರು: ಗ್ರಾಮ ಪಂಚಾಯತ್: ತಾಲೂಕು: ಜಿಲ್ಲೆ:

ದಿನಾಂಕ: ಸಹಿ